**ದಿನಾಂಕಃ 27-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು:** ಆರೋಪಿ ಪರ ವಕೀಲರಿಂದಃ

1) ನಾನು 10 ನೇ ತರಗತಿಯವರೆಗೆ ಓದಿದ್ದು, ನನಗೆ ಓದಲು ಬರೆಯಲು ಬರುತ್ತದೆ. ನಾನು ಗೋಕಾಕಿನ ಮಾರ್ಕಂಡೇಯ ನಗರದಲ್ಲಿ ವಾಸವಾಗಿರುತ್ತೇನೆ ಮತ್ತು ಗೋಕಾಕಿನಲ್ಲಿಯೇ ಪೆಂಡಾಲ ಉದ್ಯಗೋವನ್ನು 12 ವರ್ಷಗಳಿಂದ ಮಾಡುತ್ತಿರುತ್ತೇನೆ. ಪಿರ್ಯಾದುದಾರರು ನನಗೆ ಪರಿಚಯವಿರುತ್ತಾರೆ, ಪಿರ್ಯಾದುದಾರರ ಮನೆ ನನ್ನ ಮನೆಯ ಪಕ್ಕದಲ್ಲಿ ಇರುತ್ತದೆ. ಪಿರ್ಯಾದುದಾರರ ಮನೆಯಲ್ಲಿ ಅವರ ಅಣ್ಣ , ತಂದೆ-ತಾಯಿ ಇರುತ್ತಾರೆ. ಆರೋಪಿಯ ಪರಿಚಯವಿದ್ದು, ಅವರ ಮನೆ ಮಹಾಲಿಂಗೇಶ್ವರ ನಬರದಲ್ಲಿ ಬರುತ್ತದೆ. ಪಿರ್ಯಾದುದಾರ ಮಾಡುವ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ. ಪಿರ್ಯಾದುದಾರ ಪ್ರಸ್ತುತ ಆರೋಪಿಯ ಜೊತೆ ಹೊರತು ಪಡಿಸಿ ಬೇರೆ ಯಾರ ಜೊತೆ ವ್ಯವಹಾರ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುತ್ತದೆ.

2) ನನಗೆ ಪಿ.ಡಬ್ಲ್ಯೂ-2 ಇಮ್ರಾನ ಫಾರುಕ ಪಟೇಲ ಪರಿಚಯವಿರುತ್ತದೆ. ಸದರಿ ಇಮ್ರಾನ ಮತ್ತು ಪಿರ್ಯಾದುದಾರ ನನಗೆ ಮೊದಲಿನಿಂದಲೂ ಪರಿಚಯವಿರುತ್ತಾರೆ. ಪಿರ್ಯಾದಿ ಆರೋಪಿಗೆ ನನ್ನ ಸಮಕ್ಷಮ ರೂ. 5,00,000/- ಗಳಲ್ಲಿ ಮೊದಲು ರೂ. 50,000/- ಗಳನ್ನು ನೀಡಿದ್ದು ನಂತರ ಹಂತಹಂತವಾಗಿ ಒಟ್ಟು

ರೂ. 5,00,000/- ಗಳನ್ನು ನೀಡಿದ್ದು ಆದರೆ ನಾನು ಸದರಿ ರೂ. 50,000/- ನೀಡುವಾಗ ಮಾತ್ರ ಹಾಜರಿದ್ದೆ. ಸದರಿ ರೂ. 50,000/- ಗಳನ್ನು ಆರೋಪಿಯ ಮನೆಯಲ್ಲಿ ಪಿರ್ಯಾದುದಾರ ನೀಡಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಛಾಪಾ ಕಾಗದವನ್ನು ಬಸವೇಶ್ವರ ಸರ್ಕಲ್‌ನ ಮುಂಭಾಗದ ಅಂಗಡಿಯಲ್ಲಿ ತಯಾರಿಸಿರುತ್ತದೆ. ಆ ಸಮಯದಲ್ಲಿ ನಾನು, ಪಿರ್ಯಾದುದಾರ ಮತ್ತು ಆರೋಪಿ ಹಾಜರಿದ್ದೇವು. ಸದರಿ ಕಾಗದದ ಮೇಲೆ ವಿಷಯಗಳನ್ನು ಬರೆಯಲು ಪಿರ್ಯಾದುದಾರರೇ ಮಾಹಿತಿ ನೀಡಿರುತ್ತಾರೆ. ಛಾಪಾ ಕಾಗದದ ಮೇಲೆ ವಿಷಯವನ್ನು ಬೆರಳಚ್ಚು ಮಾಡಿಸಿರುತ್ತದೆ. ನಿಪಿ-6 ನ್ನು ಬೆರಳಚ್ಚು ಮಾಡಿದವರೇ ನಮಗೆ ಓದಿ ಹೇಳಿರುತ್ತಾರೆ. ಅದನ್ನು ಬೆರಳಚ್ಚು ಮಾಡಿದವರ ಹಾಗೂ ಅಂಗಡಿಯ ಹೆಸರು ನನಗೆ ಗೊತ್ತಿಲ್ಲ. ನಿಪಿ-6 ರಲ್ಲಿ ಆರೋಪಿ ಮತ್ತು ನಾನು, ಪಿ ಡಬ್ಲ್ಯೂ-2 ರವರು ಸಹಿ ಮಾಡಿರುತ್ತೇವೆ. ಮೊದಲು ಆರೋಪಿ ಸಹಿ ಮಾಡಿರುತ್ತಾರೆ. ನಾನು ನಿಪಿ-6 ನ್ನು ಓದಿ ಸಹಿ ಮಾಡಿರುತ್ತೇನೆ. ನಿಪಿ-6 ರಲ್ಲಿ ಇಂತಿ ತಮ್ಮ ವಿಶ್ವಾಸಿ ಎಂದು ಬರೆದಿರುವ ಸ್ಥಳದಲ್ಲಿ ಯಾರ ಹೆಸರನ್ನು ಬರೆದಿರುವುದಿಲ್ಲ ಮತ್ತು ಯಾರ ಸಹಿ ಇರುವುದಿಲ್ಲ ಎಂದರೆ ಸರಿ.

3) ಪಿರ್ಯಾದುದಾರ ನನ್ನ ಸಂಬಂಧಿ ಎಂದರೆ ಸರಿಯಲ್ಲ. ನಾನು, ಪಿರ್ಯಾದುದಾರ ಮತ್ತು ಡಬ್ಲ್ಯೂ 2 ರವರು ಶಾಲೆ ಕಲಿತಿದ್ದು, ಆರೋಪಿ ಶಾಲೆ ಕಲಿತಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಶಿಕ್ಷಣದ ಬಗ್ಗೆ ನನಗೆ ಮಾಹಿತಿ ಇಲ್ಲ.

ಆರೋಪಿಯಿಂದ ಹಣ ಕಬಳಿಸುವ ಉದ್ದೇಶದಿಂದ ನಾನು, ಪಿರ್ಯಾದುದಾರ ಹಾಗೂ ಪಿ ಡಬ್ಲ್ಯೂ 2 ರವರು ಸೇರಿ ನಿಪಿ–6 ನ್ನು ಸೃಷ್ಟಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಆರೋಪಿಯೇ ತಾನು ಹಣ ಪಡೆದಿರುವುದಾಗಿ ತಮಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ–6 ರಲ್ಲಿ ಪಿರ್ಯಾದುದಾರರ ಸಹಿ ಇರುವುದಿಲ್ಲ. ನಾನು ಪಿರ್ಯಾದುದಾರನಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿ ಪಿರ್ಯಾದುದಾರರಿಂದ ಹಣ ಪಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನುಡಿದಿರುವ ಸಾಕ್ಷ್ಯವು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.